ಕರ್ನಾಟಕ ಸರ್ಕಾರ

# ಭ್ರಷ್ಟಾಚಾರ ನಿಗ್ರಹ ದಳ

ದಿನಾಂಕ: 23.02.2019

## ಪತ್ರಿಕಾ ಪ್ರಕಟಣೆ

ಬೆಂಗಳೂರು ನಗರದ ನಿವಾಸಿಯೊಬ್ಬರಿಗೆ ಸೇರಿದ ನಿವೇಶನದ ಮರು ಹಂಚಿಕೆ ಮತ್ತು ಮರು ಮಂಜೂರಾತಿ ಪ್ರಕ್ರಿಯೇಯ ಸಮಯದಲ್ಲಿ ಬಂದಿರುವ ತಕರಾರು ಅರ್ಜಿಯನ್ನು ಇತ್ಯರ್ಥಪಡಿಸುವ ಸಲುವಾಗಿ ಶ್ರೀ ಬಸವರಾಜು, ಸರ್ವೆಯರ್, ಆರ್ & ಆರ್ ವಿಭಾಗ, ಬಿಡಿಎ ಕೇಂದ್ರ ಕಛೇರಿ, ಬೆಂಗಳೂರು ಇವರು ರೂ.10,00,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:23-02-2019 ರಂದು ಶ್ರೀ ಬಸವರಾಜು, ಖಾಸಗಿ ವ್ಯಕ್ತಿ, ಬಿಡಿಎ ಕೇಂದ್ರ ಕಛೇರಿ, ಬೆಂಗಳೂರು ಇವರು ಶ್ರೀ ಬಸವರಾಜು, ಸರ್ವೆಯರ್ ಇವರ ಪರವಾಗಿ ರೂ.5,00,000/- ನಗದು ಮತ್ತು ರೂ.5,00,000/- ಮೊತ್ತದ ಚೆಕ್‌ನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಠಾಣೆಯ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿರುತ್ತಾರೆ. ಶ್ರೀ ಬಸವರಾಜು, ಸರ್ವೆಯರ್ ಮತ್ತು ಶ್ರೀ ಬಸವರಾಜು, ಮಧ್ಯವರ್ತಿ ರವರುಗಳನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ, ಪ್ರಕರಣದ ತನಿಖೆ ಮುಂದುವರೆದಿದೆ.